ಬೋರ್‌ವೆಲ್‌ನಿಂದ ನೀರು ತೆಗೆಯುತ್ತಿದ್ದಾರೆ. ಅವರಿಗೆ ಚೆನ್ನಾಗಿ ನೀರು ಸಿಗುತ್ತಿದೆ. 100ರಿಂದ 150ಅಡಿಯಲ್ಲಿ ನೀರು ಬರುತ್ತಿದೆ. ಆದರೆ ನಿಮ್ಮ ಗೌರ್ನಮೆಂಟ್ ಎಜೆನ್ಸಿ ರಿಗ್‌ನವರು ಯಾರೂ ರಿಸ್ಕ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ತಾವು ಸ್ವಲ್ಪ ಮನಸ್ಸಿನಲ್ಲಿ ತೆಗೆದುಕೊಳ್ಳುತ್ತೇನೆ ಎಂದು ಏನು ಹೇಳಿದ್ದೀರಿ ಅದನ್ನು ಇನ್ನೊಮ್ಮೆ ಸ್ಪಷ್ಟವಾಗಿ ಮಾಡಿಕೊಡುತ್ತೇನೆಂದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಆದಷ್ಟು ಜಾಗ್ರತೆ ಅದನ್ನು ಮಾಡುತ್ತೇನೆ.

ಧಾರವಾಡದಲ್ಲಿ ನಗರ ಯೋಜನಾವಲಯ ಕಛೇರಿಯ ಸ್ಥಳಾಂತರ

317(2116)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ನಗರಾನಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿರುವ ನಗರ ಯೋಜನಾ ಇಲಾಖೆಯ ವಲಯ ಕಛೇರಿಯನ್ನು ವಿಭಾಗ ಕಛೇರಿಯನ್ನಾಗಿ ಮಾಡಿ ಬೆಳಗಾಂಗೆ ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ನಗರ ಯೋಜನಾ ಜಂಟಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಇದನ್ನು ಮಂಜೂರಾಗಿರುವ ಎಲ್ಲಾ ತಾತ್ಕಾಲಿಕ ಹುದ್ದೆಗಳೊಂದಿಗೆ ಕೂಡಲೇ ಜಾರಿಗೆ ಬರುವಂತೆ ಬೆಳಗಾಂ ಕೇಂದ್ರಸ್ಥಾನಕ್ಕೆ ಸ್ಥಳಾಂತರಿಸಲು ಸರ್ಕಾರಿ ಆದೇಶ ಸಂ: ನಅಇ 109 ನಯೋಸೆ 97 ದಿನಾಂಕ: 29-1-99ರಲ್ಲಿ ಮಂಜೂರಾತಿ ನೀಡಿದೆ.

ಆ) ನಗರ ಯೋಜನಾ ಇಲಾಖೆಯಲ್ಲಿ ಎರಡು ಹೊಸ ವಿಭಾಗೀಯ ಕಛೇರಿಗಳನ್ನು ಗುಲ್ಬರ್ಗಾ ಹಾಗೂ ಮೈಸೂರು ಕೇಂದ್ರಸ್ಥಾನಗಳಲ್ಲಿ ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆ. ಬೆಳಗಾಂ, ಕಂದಾಯ ವಿಭಾಗಕ್ಕೆ ನಗರ ಯೋಜನಾ ಜಂಟಿ ನಿರ್ದೇಶಕರು ವಿಭಾಗೀಯ ಕಛೇರಿಯನ್ನು ಸ್ಥಾಪಿಸಲು ಹಾಲಿ ಧಾರವಾಡದಲ್ಲಿರುವ ವಲಯ ಕಛೇರಿಯನ್ನು ಮಂಜೂರಾದ ಎಲ್ಲಾ ಹುದ್ದೆಗಳೊಂದಿಗೆ ಬೆಳಗಾಂ, ಕಂದಾಯ ವಿಭಾಗ

ಕೇಂದ್ರಕ್ಕೆ ಸ್ಥಳಾಂತರಿಸಲು ಸರ್ಕಾರ ಮಂಜೂರಾತಿ ನೀಡಿದೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಧಾರವಾಡ ನಗರದಲ್ಲಿ ನಗರ ಯೋಜನಾ ಇಲಾಖೆಯ ವಲಯ ಕಛೇರಿಯಿದೆ. ಕಳೆದ 18 ವರ್ಷಗಳಿಂದ ಅದು ಕೆಲಸ ಮಾಡುತ್ತಿದೆ ಆದರೆ ಈಗ ಅದನ್ನು ಬೆಳಗಾಂಗೆ ಸ್ಥಳಾಂತರ ಮಾಡುತ್ತಿದ್ದಾರೆ. ಬೆಳಗಾಂನಲ್ಲಿ ವಿಭಾಗೀಯ ಕಛೇರಿಯೆಂದು ಮಾಡಿ ಇಲ್ಲಿದ್ದಂತಹ ಎಲ್ಲ ಹುದ್ದೆಗಳನ್ನು ರದ್ದುಮಾಡಿ ಅಲ್ಲಿಗೆ ಸ್ಥಳಾಂತರ ಮಾಡುತ್ತಿದ್ದಾರೆ. ಕಳೆದ 18 ವರ್ಷಗಳಿಂದ ಧಾರವಾಡ ಜಿಲ್ಲೆ ಮತ್ತು ಅಜುಬಾಜು ಇದ್ದಂತಹ ಜನರಿಗೆ ಇತರ ಜಿಲ್ಲೆಗಳಿಗೆ ಅದರಲ್ಲೂ ಗ್ರಾಮೀಣ ಜನರಿಗೆ ಈವೊಂದು ನಗರ ಯೋಜನಾ ವಲಯ ಕಛೇರಿ ಇದ್ದುದರಿಂದ ಬಹಳಷ್ಟು ಪ್ರಯೋಜನವಾಗಿತ್ತು. ಎನ್‌ಐ ಮಾಡಿಸಲಿಕ್ಕೆ ಯಾವುದೋ ಒಂದು ನೈಟ್ಸ್ ಮಾಡಿಸಲಿಕ್ಕೆ ಬಹಳ ಅನುಕೂಲವಾಗಿತ್ತು. ಆವೊಂದು ಕಛೇರಿಯನ್ನು ನೀವು ಬೆಳಗಾಂಗೆ ವರ್ಗಾವಣೆ ಮಾಡಿದರೆ ಇಲ್ಲಿ ಇದ್ದಂತಹ, ಕೇವಲ ಧಾರವಾಡ ಜಿಲ್ಲೆಯಲ್ಲ ಹಾವೇರಿ, ಗದಗ ಮತ್ತು ಇನ್ನಿತರ ಜನರಿಗೂ ಸಹಿತ ಬಹಳ ಅನಾನುಕೂಲತೆಯಾಗಿದೆ. ದಯವಿಟ್ಟು ಇಲ್ಲಿ ಇದ್ದಂತಹ ಜಂಟಿ ನಿರ್ದೇಶಕರ ವಲಯ ಯೋಜನಾ ಕಛೇರಿಯನ್ನು ಇಲ್ಲೇ ಇಡಿ. ಬೆಳಗಾಂನಲ್ಲಿ ವಿಭಾಗೀಯ ಕಛೇರಿಯನ್ನು ಬೇರೆ ಪ್ರತ್ಯೇಕ ಮಾಡಿರಿ. ಇಲ್ಲಿದ್ದಂಥ ಹುದ್ದೆಗಳನ್ನು ರದ್ದುಮಾಡಿ ಅಲ್ಲಿ ಕಛೇರಿ ಮಾಡುವುದು ಅವಶ್ಯವಿಲ್ಲ. ದಯವಿಟ್ಟು ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು, ಅಲ್ಲಿರುವ ಜನರ ತೊಂದರೆಯನ್ನು ನಿವಾರಣೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಎಸ್.ಪಾಟೀಲ್(ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಧಾರವಾಡಕ್ಕೆ ಒಂದೇ ವಲಯ ಇತ್ತು. ಕೇಂದ್ರ ಕಛೇರಿಯಲ್ಲಿ ಒಂದು ಹೆಡ್ ಆಫೀಸ್ ಇತ್ತು. ಸುಮಾರು ವರ್ಷಗಳಿಂದ ಇರತಕ್ಕ ವ್ಯವಸ್ಥೆ ಇದು. ಈಗ ಸರ್ಕಾರ ಒಂದು ಆಡಳಿತಾತ್ಮಕ ದೃಷ್ಟಿಯಿಂದ ಜನರಿಗೆ ಸೌಕರ್ಯ ಸಿಗಲಿ ಎನ್ನುವಂತಹ ದೃಷ್ಟಿಯನ್ನಿಟ್ಟುಕೊಂಡು ಮೈಸೂರು, ಗುಲ್ಬರ್ಗ ಮತ್ತು ಬೆಳಗಾಂ ಈ ಡಿವಿಜನ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಂದೊಂದು ಜಾಯಿಂಟ್ ಡೈರೆಕ್ಟರ್ ಆಫೀಸ್ ಮಾಡಬೇಕೆನ್ನತಕ್ಕ ತೀರ್ಮಾನವನ್ನು ತೆಗೆದುಕೊಂಡು ಈಗಾಗಲೇ ಮೈಸೂರು ಮತ್ತು ಗುಲ್ಬರ್ಗದಲ್ಲಿ ಅಪಾಯಿಂಟ್‌ಮೆಂಟ್ ಆಗಿದೆ. ಇಲ್ಲಿರತಕ್ಕ ಆಫೀಸ್ ಸುಮಾರು ವರ್ಷಗಳಿಂದ ಇದ್ದಂತಹ ಆಫೀಸರನ್ನು ಶಿಫ್ಟ್ ಮಾಡತಕ್ಕದ್ದಲ್ಲ. ಆ ತೀರ್ಮಾನದ ಪ್ರಕಾರ ಅದು ಡಿವಿಜನ್ ಹೆಡ್‌ಕ್ವಾರ್ಟರ್‌ನಲ್ಲಿರತಕ್ಕದ್ದು ಸಮಂಜಸ ಎನ್ನುವ ದೃಷ್ಟಿಯಿಂದ ಆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಆದರೆ ಇದುವರೆಗೆ ಆ ಆಫೀಸನ್ನು ಶಿಫ್ಟ್ ಮಾಡಿಲ್ಲ. ಅದು ಇನ್ನೂ ಅಲ್ಲೇ ಕಾರ್ಯಗತ ಮಾಡುತ್ತಿದೆ. ಆಡಳಿತಾತ್ಮಕ ದೃಷ್ಟಿಯಿಂದ ಎಲ್ಲ ಜಾಯಿಂಟ್ ಡೈರೆಕ್ಟರ್ ಕಛೇರಿಗಳು ಡಿವಿಜನ್‌ನಲ್ಲಿ ಕೆಲಸ ಮಾಡಬೇಕೆನ್ನತಕ್ಕದ್ದು ಸರ್ಕಾರದ ತೀರ್ಮಾನ.

ಅಧ್ಯಕ್ಷರು: ಮಾನ್ಯಮಂತ್ರಿಗಳು ಕೆಲವು ವಿಚಾರಗಳನ್ನು ಹೇಳಿದರು. ದಿವಂಗತ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಉದ್ದೇಶ ಪೂರ್ವಕವಾಗಿ ಅನೇಕ ಕಛೇರಿಗಳನ್ನು ಧಾರವಾಡದಲ್ಲಿದ್ದುದನ್ನು ಬೆಳಗಾಂಗೆ ವರ್ಗಾಯಿಸಿದರು. ಕಾರಣ ಏನೆಂದರೆ ಅಲ್ಲಿ ಕಛೇರಿಗಳು ಇದ್ದರೆ ನಮ್ಮ ಜನ ಹೋಗಿ ಬರುತ್ತಾರೆ, ಕನ್ನಡದ ಸ್ಥಾನ ಭದ್ರವಾಗ ಬೇಕೆನ್ನುವ ದೃಷ್ಟಿಯಿಂದ ಅಲ್ಲಿ ಕನ್ನಡಿಗರಿಗೆ ಹೆಚ್ಚು ಒತ್ತು ಬರಬೇಕೆನ್ನುವ ದೃಷ್ಟಿಯಿಂದ ಉದ್ದೇಶ ಪೂರ್ವಕವಾಗಿ ಮಾಡಿದ್ದಾರೆ. ದಯಮಾಡಿ ರಾಜ್ಯದ ಹಿತದೃಷ್ಟಿಯಿಂದ ನೀವು ಅದನ್ನು ಸ್ವಾಗತ ಮಾಡಿ. ಅದಕ್ಕೆ ತೊಂದರೆ ಮಾಡುವುದಕ್ಕೆ ಹೋಗಬೇಡಿ. ನಿಮಗೆ ತೊಂದರೆಯಾದರೂ ಚಿಂತೆಯಿಲ್ಲ. ಬೇಕಾದರೆ ಮಾಜಿ ಸಭಾದ್ಯಕ್ಷರಾದ ಕೌಜಲಗಿಯವರನ್ನು ಕೇಳಿ ಯಾವ ಸನ್ನಿವೇಶದಲ್ಲಿ ದೇವರಾಜ ಅರಸ್‌ರವರು ಈ ತೀರ್ಮಾನ ತೆಗೆದುಕೊಂಡರು ಅದರಿಂದ ಒಳ್ಳೆಯದಾಯಿತಾ ಅಥವಾ ಇಲ್ಲವಾ ಎಂದು ಅವರನ್ನು ಕೇಳಿ. ಮಂತ್ರಿಗಳೆ, ನಿಮ್ಮ ಜೊತೆಗೆ ಯಾವಾಗಲೂ ಇದ್ದೇನೆ.

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್ (ಪೌರಾಡಳಿತ ರಾಜ್ಯ ಮಂತ್ರಿ): ಮಾನ್ಯ ಅಧ್ಯಕ್ಷರೇ, ಉತ್ತರ ಬಂದಿಲ್ಲ. ತರಿಸಿಕೊಡುತ್ತೇನೆ.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳೋಣ್ವಾ? ಹೆಲ್ಡ್ ಓವರ್ ಮಾಡಿ ನಾಳೆ ತೆಗೆದುಕೊಳ್ಳೋಣವೇನು?

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್: ಉತ್ತರ ಬರಬೇಕು.

ಅಧ್ಯಕ್ಷರು: ಹೌದಾ? ಎರಡನೇ ರೌಂಡ್‌ನಲ್ಲಿ ಟ್ರೈ ಮಾಡೋಣ. ಉತ್ತರ ಇನ್ನೂ ಬರಬೇಕಾಗಿದೆ.

ಮೈಸೂರು ನಗರಕ್ಕೆ ಕಬಿನಿ ಜಲಾಶಯದಿಂದ ನೀರು ಸರಬರಾಜು.

320(2090)

ಶ್ರೀ ಹೆಚ್.ಎಸ್.ಶಂಕರಲೀಗೇಗೌಡ (ಜಾಮರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಕ್ಕೆ ಕಬಿನಿ ಜಲಾಶಯದಿಂದ ನೀರು ಸರಬರಾಜು ಮಾಡುವ ಉದ್ದೇಶವೇನಾದರೂ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ವೆಚ್ಚ ಎಷ್ಟು?